# ಕಿಸ್ ಅಮರ ಮಧುರ

ಗುಸ್ಟಾವ್ ಕ್ಲಿಮ್ಟ್‌ನ 'ಕಿಸ್' ವಿಶ್ವಪ್ರಸಿದ್ಧ ಕಲಾಕೃತಿ. ಚಿನ್ನ, ಬೆಳ್ಳಿ, ಪ್ಲಾಟಿನಂ ಎರಕಗಳನ್ನೊಳಗೊಂಡಆಕಲಾಕೃತಿಪ್ರೇಮದಉನ್ಮತ್ತತೆಯನ್ನೂಔನ್ನತ್ಯವನ್ನೂ ಸಂಕೇತಿಸುವಂತಿದೆ. ವಿಶ್ವದ ಅತಿ ದುಬಾರಿ ಕಲಾಕೃತಿಗಳಲ್ಲೊಂದಾದ ಹಾಗೂ ಆಸ್ಟ್ರೇಲಿಯಾದ ಹೆಮ್ಮೆ ಎನಿಸಿರುವ 'ಕಿಸ್' ಸಹೃದಯರ ಮನಸ್ಸುಗಳಲ್ಲಿ ದಶಕಗಳಿಂದ ಬೆಳೆಯುತ್ತಲೇ, ಹೊಸ ಭಾವ–ಬಣ್ಣಗಳನ್ನು ಹೊಮ್ಮಿಸುತ್ತಲೇ ಕಲಾಪ್ರಪಂಚದಲ್ಲಿ ನವನವೀನವಾಗಿ ಉಳಿದುಬಂದಿದೆ.

■ ಡಾ. ಪ್ರೇಮಲತ ಬಿ.





ಗುಸ್ಟಾವ್ ಕ್ಲಿಮ್ಟ್

ಮಧ್ಯ ಯೂರೋಪಿನ ದಕ್ಷಿಣ ಭಾಗದಲ್ಲಿರುವ ಆಸ್ಟ್ರಿಯಾ ಅಭೂತಪೂರ್ವ ನೈಸರ್ಗಿಕ ಸೌಂದರ್ಯಕ್ಕಾಗಿ ಪ್ರಸಿದ್ಧ. ಆ ದೇಶದಲ್ಲಿ ವರ್ಷಪೂರ್ತಿ ಹಿಮಚ್ಛಾದಿತವಾಗಿರುವ ಆಲ್ಪೈನ್ ಪರ್ವತಶ್ರೇಣಿಗಳಿವೆ. ಅಲ್ಲಿ ಸ್ಕೀಯಿಂಗ್ ಮಾಡಲು ಪ್ರಪಂಚದ ಎಲ್ಲೆಡೆಗಳಿಂದ ಜನರು ಬರುವುದುಂಟು. ಅದು ಕಲಾಕಾರರ ತವರೂರು ಸಹ. ವಿಶ್ವದ ಮೊದಲ ಇಪ್ಪತ್ತು ಶ್ರೀಮಂತ ದೇಶಗಳ ಪಟ್ಟಿಯಲ್ಲಿ ಆಸ್ಟ್ರಿಯಾ ತನ್ನ ಸ್ಥಾನವನ್ನು ಬಹುಕಾಲದಿಂದ ಕಾಪಾಡಿಕೊಂಡಿದೆ. ಸರಳವಾಗಿ ಹೇಳಬೇಕೆಂದರೆ ಆಸ್ಟ್ರಿಯಾ ಶ್ರೀಮಂತ ದೇಶ, ಜೊತೆಗೆ ದುಬಾರಿಯೂ ಹೌದು.

ಆಸ್ಟ್ರಿಯಾದ ರಾಜಧಾನಿ ವಿಯೆನ್ನಾ ಎನ್ನುವ ನಗರ. ಆಸ್ಟ್ರಿಯಾ ದೇಶದಲ್ಲಿ ಒಂಬತ್ತು ಪ್ರಾಂತ್ಯಗಳಿದ್ದು, ಅವುಗಳಲ್ಲಿ ವಿಯೆನ್ನಾ ಅತ್ಯಂತ ದೊಡ್ಡದು ಮತ್ತು ಪ್ರಸಿದ್ಧವಾದ ಪ್ರಾಂತ್ಯ/ನಗರ. ಅದು ನೂರಾರು ವರ್ಷಗಳಿಂದ ಕಲೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರಬಿಂದುವೂ ಆಗಿದೆ.

ಆಸ್ಟ್ರಿಯಾ ದೇಶದ ಪಶ್ಚಿಮೋತ್ತರ ಭಾಗದಲ್ಲಿ ಜರ್ಮನಿ, ಉತ್ತರದಲ್ಲಿ ಚೆಕ್ ರಿಪಬ್ಲಿಕ್, ಪೂರ್ವೋತ್ತರದಲ್ಲಿ ಸ್ಲೊವಾಕಿಯ, ಪೂರ್ವದಲ್ಲಿ ಹಂಗರಿ, ದಕ್ಷಿಣದಲ್ಲಿ ಸ್ಲೊವೇನಿಯ ಮತ್ತು ಇಟಲಿ, ಪಶ್ಚಿಮದಲ್ಲಿ ಸ್ವಿಟ್ಜರ್ಲೆಂಡ್ ಮತ್ತು ಲೆಶ್ಟೇನ್ ದೇಶಗಳಿವೆ. ಇವೆಲ್ಲ ದೇಶಗಳ ಭಾಷೆ, ಕಲೆ ಮತ್ತು ಸಂಸ್ಕೃತಿಗಳ ಪ್ರಭಾವ ಆಸ್ಟ್ರಿಯಾದ ಮೇಲಾಗಿದೆ.

ಆಸ್ಟ್ರಿಯಾ ದೇಶದಲ್ಲಿ ಕೇವಲ ಶೇ. 2.7ರಷ್ಟು ಜರ್ಮನ್ನರು ಉಳಿದಿದ್ದರೂ, ಶೇ. 81.1ರಷ್ಟಿರುವ ಆಸ್ಟ್ರಿಯನ್ನರು ಮಾತನಾಡುವುದು ಜರ್ಮನ್ ಭಾಷೆಯಲ್ಲಿ. ಆ ದೇಶದ ಅಧಿಕೃತ ಭಾಷೆ ಜರ್ಮನ್! ಇನ್ನುಳಿದ ಜನರು ಜರ್ಮನ್ ಭಾಷೆಯ ಇತರೆ ಉಪಭಾಷೆಯ ಪ್ರಕಾರಗಳನ್ನು ಮಾತನಾಡಲು ಬಳಸುತ್ತಾರೆ.

ಆಸ್ಟ್ರಿಯಾದ ನೆರೆಹೊರೆಯ ಜರ್ಮನಿ, ಹಂಗೆರಿ, ಚೆಕ್ ರಿಪಬ್ಲಿಕ್, ಸ್ಲೊವೇನಿಯ, ಸ್ಲೊವಾಕಿಯ ಇನ್ನಿತರ ದೇಶಗಳ ಎಲ್ಲ ಕಲಾಕಾರರಿಗೆ ಶತ ಶತಮಾನಗಳಿಂದ ವಿಯೆನ್ನಾ ನಗರ ಕಲೆಯ ಕನಸಿನ ನಗರಿ. ಅಲ್ಲಿ ನಡೆವ ಪ್ರತಿಷ್ಠಿತ ಕಲಾಪ್ರದರ್ಶನಗಳಲ್ಲಿ ಹೆಸರು ಮಾಡಬೇಕೆನ್ನುವುದು ಎಲ್ಲ ಕಲಾಕಾರರ ಕನಸು. ಅಲ್ಲಿನ ಜಗತ್ಪ್ರಸಿದ್ಧ ಕಲಾ ಪ್ರದರ್ಶನಗಳು ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಎಂದಿನಿಂದಲೂ ಮೊನಚಾದ ಸ್ಪರ್ಧೆಯಿದೆ.